ಆರ್ ಬಿ ಐ / 2004-05 / 449

ಡಿಬಿಒಡಿ .ಸಂಖ್ಯೆ ಬಿ ಎಲ್. ಬಿ ಸಿ. 86 / 22.01.001 / 2004-05

ಏಪ್ರಿಲ್ 30, 2005
ವೈಶಾಖ 10,1927 (ಶಕ)

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ
(ಆರ್ಆರ್‌ಬಿ ಗಳನ್ನು ಹೊರತುಪಡಿಸಿ)

ಮನ್ಯರೆ,

**ಬ್ಯಾಂಕಿಂಗ್ ನಿಯಂತ್ರಣ ಕಾಯದೆ, 1949 ರ ಪ್ರಕರಣ 23 – ಮನೆ ಬಾಗಿಲಲ್ಲಿ ಬ್ಯಾಂಕಿಂಗ್ ಸೌಲಭ್ಯ**

ದಯವಿಟ್ಟು ನಮ್ಮ ಸುತ್ತೋಲೆ ಡಿಬಿಒಡಿ ಸಂಖ್ಯೆ ಬಿ ಎಲ್ ಬಿ ಸಿ 42 / ಸಿ –168–83 ದಿನಾಂಕ ಮೇ 24,1983 ನ್ನು(ಪ್ರತಿ ಲಗತ್ತಿಸಿದೆ) ನೋಡಿ. ಅದರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅಗತ್ಯ ಅನುಮತಿಯನ್ನು ಪಡೆಯದೆ ಬ್ಯಾಂಕುಗಳು ತಮ್ಮ ಗ್ರಾಹಕರ ಆವರಣಗಳಲ್ಲಿ ಯಾವುದೇ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡಬಾರದೆಂದು ಬ್ಯಾಂಕುಗಳಿಗೆ ಸಲಹೆ ಮಾಡಲಾಗಿತ್ತು.

2. ತಮ್ಮ ಆವರಣದಲ್ಲಿ ನಗದು ಹಣದ ಸಂಗ್ರಹಣೆ ಸೇರಿದಂತೆ ಬ್ಯಾಂಕಿಂಗ್ ಸೌಲಭ್ಯಗಳನ್ನು ದೊರೆಯುವಂತೆ ಮಾಡಬೇಕೆಂದು ರೈಲ್ವೆ ಮುಂತಾದ ಸರ್ಕಾರಿ ಇಲಾಖೆಗಳಿಂದ ಹಲವಾರು ಕೋರಿಕೆಗಳು ಮತ್ತು ಬ್ಯಾಂಕುಗಳಿಂದ ಮನವಿಗಳು ಬಂದಿರುವ ದೃಷ್ಟಿಯಿಂದ ಬ್ಯಾಂಕಿಂಗ್ ನಿಯಂತ್ರಣ ಕಾಯದೆ, 1949 ರ 23 ನೇ ಪ್ರಕರಣದ ಚೌಕಟ್ಟಿನೊಳಗೆ ಗ್ರಾಹಕರ ಆವರಣದೊಳಗೆ ಸೇವೆಗಳನ್ನು ಒದಗಿಸುವುದಕ್ಕಾಗಿ ಯೋಜನೆಯೊಂದನ್ನು ಬ್ಯಾಂಕುಗಳು ತಮ್ಮ ಮಂಡಳಿಗಳ ಅನುಮೋದನೆ ಪಡೆದು ರೂಪಿಸಿ ಅನುಮೋದನೆಗಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸಬೇಕೆಂದು ನಿರ್ಧರಿಸಲಾಗಿದೆ.

3. ಈ ಮಧ್ಯೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳಿಗೆ ಅನಾನುಕೂಲವಾಗಬಾರದೆಂಬ ದೃಷ್ಟಿಯಿಂದ ಏಜೆನ್ಸಿ ಬ್ಯಾಂಕುಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳ ಆವರಣಗಳಿಂದ ನಗದು ಹಣ ಮತ್ತು ನಂಬಂಧಪಟ್ಟ ಸಂಲೇಖಗಳು ಮುಂತಾದವುಗಳನ್ನು ಸಂಗ್ರಹಿಸುವುದನ್ನು ಮುಂದುವರೆಸಬಹುದು.

**ತಮ್ಮ ವಿಶ್ವಾಸಿ,**

**(ಆನಂದ ಸಿನ್ಹಾ)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು**